ದಿನಾಂಕಃ 16-03-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಬಿ ಕೆ ಜೆ ವಕೀಲರಿಂದಃ
ಪ್ರತಿವಾದಿ ನಂ.15 ರಿಂದ 17 ರವರ ಪರವಾಗಿಃ-

ಮೊದಲನೆ ಪ್ರತಿವಾದಿ ಖುದ್ದು ಊರು ಅಕ್ಕಿಸಾಗರ ಎನ್ನುತ್ತಾರೆ ಆದರೆ ನನಗೆ ನಿಖರವಾಗಿ ಗೊತ್ತಿಲ್ಲ. ಮೊದಲನೆ ಪ್ರತಿವಾದಿ ಗೋಕಾಕಕ್ಕೆ ಯಾವಾಗ ಬಂದ ಎಂಬುದು ನನಗೆ ಗೊತ್ತಿಲ್ಲ. ಆತ ಗೋಕಾಕಕ್ಕೆ ಬಂದ ನಂತರ ಚಹಾ ವ್ಯಾಪಾರ ಮಾಡುತ್ತಿದ್ದ ಎಂಬುದನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ತದ ನಂತರ ಆತ ಬಟ್ಟೆ ಹೊಲೆಯುವುದನ್ನು ಪ್ರಾರಂಬಿಸಿದ್ದರು. ಸದರಿ ಉದ್ಯೋಗವನ್ನು ಎಷ್ಟು ವರ್ಷ ಮೊದಲನೆ ಪ್ರತಿವಾದಿ ಮಾಡಿದ್ದ ಎಂಬುದು ನನಗೆ ಗೊತ್ತಿಲ್ಲ. ಮೊದಲನೆ ಪ್ರತಿವಾದಿ ಚಹಾ ವ್ಯಾಪಾರ ಎಷ್ಟು ವರ್ಷ ಮಾಡಿದ್ದ ಎಂಬುದನ್ನು ನಾನು ಕೇಳಿ ತಿಳಿದುಕೊಂಡಿಲ್ಲ. ಮೊದಲನೆ ಪ್ರತಿವಾದಿ ಯಾವತ್ತೂ ಬಟ್ಟೆ ವ್ಯಾಪಾರ ಮಾಡಿಲ್ಲ. ಸದರಿ ವಿಷಯ ನನಗೆ ತಿಳುವಳಿಕೆ ಬಂದಾಗಿನಿಂದ ಗೊತ್ತು. ಮೊದಲನೆ ಪ್ರತಿವಾದಿ ಈಗ ನನ್ನ ಜೊತೆ ಇರುತ್ತಾರೆ. ನನ್ನ ಮತ್ತು ಆತನ ನಡುವೆ ಸಂಬಂಧ ಚೆನ್ನಾಗಿರುತ್ತದೆ. ಮೊದಲನೆ ಪ್ರತಿವಾದಿಗೆ ಈಗ 90 ವರ್ಷ ಆಗಿದ್ದು ಆತನಿಗೆ ಜೋಲೆ ಹೊಗುತ್ತಿದ್ದುದ್ದರಿಂದ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಮಾಡಿಸಲಾಗುವುದಿಲ್ಲ. ನಾನು ಮೊದಲನೆ ಪ್ರತಿವಾದಿಯನ್ನು ನ್ಯಾಯಾಲಯದ ನಿಯೋಗಿಯ ಮುಖಾಂತರ ಆತನ ಸಾಕ್ಷ್ಯ ಮಾಡಿಸಬಹುದೋ ಅಥವಾ ಇಲ್ಲ ಎಂಬುದುನ್ನು ಕೇಳಿ ಹೇಳಬೇಕಾಗುತ್ತದೆ. ನಾನೇ ಮೊದಲನೆ ಪ್ರತಿವಾದಿಯನ್ನು ನೋಡಿಕೊಳ್ಳುತ್ತಿದ್ದೇನೆ ಎಂಬುದನ್ನು ತೋರಿಸಲು ಯಾವುದೇ ದಾಖಲಾತಿ ಹಾಜರು ಮಾಡಿಲ್ಲ. ನಾನು ಆ ಬಗ್ಗೆ ಮುಂದೆ ದಾಖಲಾತಿಗಳನ್ನು ಹಾಜರ ಮಾಡಬಲ್ಲೆ.

1960 ರಲ್ಲಿ ನಮ್ಮ ಕುಟುಂಬ ಮೊದಲು ದಿಲ್ಲಿ ರೆಡಿಮೆಡ ವ್ಯವಹಾರ ಫ್ರಾರಂಬಿವಾಯಿತು ಎಂದರೆ ನನಗೆ ಮಾಹಿತಿ ಇಲ್ಲ. ಸಿ ಟಿ ಎಸ್ ಸಂಖ್ಯೆ 3301 ಹಿರಿಯರು ಆಸ್ತಿಯೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಅಷ್ಟೊಂದು ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ನನ್ನ ಪ್ರಶಾಂತ ಇರುವ ಜಾಗೆಯಲ್ಲಿ ನಾನು ಬಟ್ಟೆ ಅಂಗಡಿ ತೆಗೆದಿರುತ್ತೇನೆ. ಮೊದಲನೆ ಪ್ರತಿವಾದಿಯನ್ನು ನಾನು ಸದರಿ ಅಂಗಡಿಗೆ ಕರೆದುಕೊಂಡು

ಬರುತ್ತೇನೆ ಆತ ಅಲ್ಲಿಯೇ ಇರುತ್ತಾರೆ. ಮೊದಲನೆ ಪ್ರತಿವಾದಿಗೆ 8 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದು ಗಂಡು ಮಕ್ಕಳ ಹೆಸರಿನಲ್ಲಿ ಬೇರೆ ಬೇರೆ ಉದ್ಯೋಗ ಇದೆ ಎಂದರೆ ಸಾಕ್ಷಿ ನಮ್ಮ ನಮ್ಮ ಹೆಸರಿನಲ್ಲಿ ಮಾಡಿಕೊಂಡಿರುತ್ತೇವೆಂದು ನುಡಿದಿರುತ್ತಾರೆ.

1982 ರಲ್ಲಿ ನಾನೇ ಪ್ರಶಾಂತ ಲಾಡ್ಜ ಕಟ್ಟಿರುತ್ತೇನೆ. ಅದಕ್ಕೆ ಸುಮಾರು 2 ವರೆ ಲಕ್ಷ ರೂ. ಖರ್ಚಾಗಿರುತ್ತದೆ. ನಾನು ಸದರಿ ಕಟ್ಟಡ ಕಟ್ಟಲು 2 ಲಕ್ಷ ರೂ. ಸಿಂಡಿಕೇಟ ಬ್ಯಾಂಕಿನಿಂದ ಸಾಲ ಪಡೆದುಕೊಂಡಿದ್ದೆ ಮತ್ತು 50 ಸಾವಿರ ರೂ. ಸಬ್ಸಿಡಿ ದೊರೆದಿತ್ತು. ನಾನು ಆ ಬಗ್ಗೆ ದಾಖಲಾತಿ ಹಾಜರು ಮಾಡಿಲ್ಲ. ನಾನು ಹುಟ್ಟಿದ ವರ್ಷ 1964. ನಾನು ಪ್ರಶಾಂತ ಲಾಡ್ಜನ್ನು ಮೊದಲ ಬಾರಿಗೆ ಪ್ರಾರಂಬಿಸಿದ್ದೆ ಎಂದರೆ ಸಾಕ್ಷಿ ಅದಕ್ಕಿನ ಮೊದಲು ನಾನು ನೌಕರಿ ಮಾಡುತ್ತಿದ್ದೆ ಎಂದು ನುಡಿದಿರುತ್ತಾರೆ. ನಾನು ನೌಕರಿಯನ್ನು ನನ್ನ ಗೆಳೆಯನಾದ ಬಾಬು ಹತ್ತಿಮರದ ರವರ ಅಂಗಡಿಯಲ್ಲಿ ಮಾಡುತ್ತಿದ್ದೆ. ನಾನು ಸದರಿ ನೌಕರಿಯನ್ನು ಸುಮಾರು 3-4 ವರ್ಷ ಮಾಡಿರುತ್ತೇನೆ. ನಾನು ಸದರಿ ವಿಷಯವನ್ನು ನನ್ನ ಪ್ರತಿವಾದ ಪತ್ರ ಮತ್ತು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ಮೊದಲನೆ ಪ್ರತಿವಾದಿಯೆ ಪ್ರಶಾಂತ ಲಾಡ್ಜನ್ನು ಕಟ್ಟಿಸಿದ್ದು ಎಂದರೆ ಸರಿಯಲ್ಲ. ಪ್ರಶಾಂತ ಲಾಡ್ಜ ಪ್ರಾರಂಬಿಸುವ ಮೊದಲು ದಿಲ್ಲಿ ರೆಡಿಮೆಡ ಅಂಗಡಿಯನ್ನು ಪ್ರಾರಂಬಿಸಲಾಗಿತ್ತು ಎಂದರೆ ಸರಿಯಲ್ಲ ಮತ್ತು ಸದರಿ ಪ್ರಶಾಂತ ಲಾಡ್ಜ ವ್ಯವಹಾರದಿಂದ ನಾವು ಬೇರೆ ಬೇರೆ ವ್ಯಾಪಾರ ಪ್ರಾರಂಬಿಸಿದ್ದೇವೆ ಎಂದರೆ ಸರಿಯಲ್ಲ.

ಪ್ರಶಾಂತ ಲಾಡ್ಜ ಇರುವ ಜಾಗೆಯಲ್ಲಿ ಮೊದಲು ಹಳೆ ಮನೆ ಇತ್ತು ಎಂದರೆ ಸರಿ. ಸದರಿ ಮನೆಯಲ್ಲಿ ನಮ್ಮ ತಂದೆ ತಾಯಿ ಮೃತ 2 ನೇ ಪ್ರತಿವಾದಿ, 3 ನೇ ಪ್ರತಿವಾದಿ ಹಾಗೂ 10 ನೇ ಪ್ರತಿವಾದಿ ಒಟ್ಟಿಗೆ ಇರುತ್ತಿದ್ದೇವು ಎಂದರೆ ಸರಿಯಲ್ಲ. 1975 ರಲ್ಲಿ ನಾವೆಲ್ಲರೂ ಚಿತ್ರಾ ಟಾಕೀಸ್ ಎದುರುಗಡೆ ಇರುವ ಕಮತಗೌಡ ರವರ ಮನೆಯಲ್ಲಿ ಒಟ್ಟಿಗೆ ವಾಸಿಸುತ್ತಿದ್ದೇವು ಎಂದರೆ ಸರಿಯಲ್ಲ. ಸದರಿ ಕಮತಗೌಡರ ಮನೆಯನ್ನು ನಾವು ಖರೀದಿಸಿ ಸದರಿ ಮನೆ ಇರುವ ಜಾಗೆಯಲ್ಲಿ ಜನತಾ ಕೊಲ್ಡ್ರಿಂಕ್ಸ ಪ್ರಾರಂಬಿಸಲಾಯಿತು ಎಂದರೆ ನನಗೆ ಮಾಹಿತಿ ಇಲ್ಲ. ಆ ಸಮಯದಲ್ಲಿ 7 ನೇ ಪ್ರತಿವಾದಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಆ ಸಮಯದಲ್ಲಿ 10 ನೇ ಪ್ರತಿವಾದಿ ಕೊಲ್ಡ್ರಿಂಕ್ಸ ವ್ಯಾಪಾರ ಮಾಡುತ್ತಿದ್ದು ಇನ್ನಿತರ ವ್ಯಾಪಾರ ಮಾಡುತ್ತಿದ್ದ ನನಗೆ ಅಷ್ಟೊಂದು ಮಾಹಿತಿ ಇಲ್ಲ. ಆ ಸಮಯದಲ್ಲಿ ವಾದಿ ಸಹ ಬಟ್ಟೆ ಅಂಗಡಿ ನಡೆಸುತ್ತಿದ್ದ. ನನ್ನ ಇನ್ನುಳಿದ ಅಣ್ಣ ತಮ್ಮಂದಿರು ಮೇಲೆ ಹೇಳಿದ ಬಟ್ಟೆ ವ್ಯಾಪಾರ ಮಾಡಲು ಎಲ್ಲಿಂದ ಹಣ ತಂದಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ.

ದಿಲ್ಲಿ ಸಮೂಹ ಎಂಬ ಹೆಸರಿನ ಅಡಿಯಲ್ಲಿ ನಿಖರವಾಗಿ ಎಷ್ಟು ಅಂಗಡಿಗಳಿವೆ ಎಂಬುದು ನನಗೆ ಗೊತ್ತಿಲ್ಲ. ಕೋರ್ಟ ಸರ್ಕಲ ನಲ್ಲಿರುವ ದಿಲ್ಲಿ ಸಲೆಕ್ಷನ ಅನೆಕ್ಸ ವ್ಯವಹಾರವನ್ನು ಪ್ರತಿವಾದಿ ನಂ.19 ಪ್ರಾರಂಬಿಸಿರುತ್ತಾರೆ. ಮೃತ ಬಸವರಾಜ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ. ಆತ ಗೌಳಿಗಲ್ಲಿಯಲ್ಲಿರುವ ಮನೆಯಲ್ಲಿ ಇರುತ್ತಿದ್ದ. ಸದರಿ ಮನೆಯ ನಂಬರ ನನಗೆ ಗೊತ್ತಿಲ್ಲ. ಆತನ ಮದುವೆ ಯಾವ ವರ್ಷದಲ್ಲಿ ಆಗಿದೆ ಎಂಬುದು ನನಗೆ ಗೊತ್ತಿಲ್ಲ. ನನ್ನ ಮದುವೆ 1982 ರಲ್ಲಿ ಆಗಿರುತ್ತದೆ. ನನ್ನ ತಂದೆಯೇ ನನ್ನ ಮದುವೆ ಮಾಡಿರುತ್ತಾರೆ. ಎಲ್ಲಾ ಮಕ್ಕಳ ಮದುವೆಯನ್ನು ನಮ್ಮ ತಂದೆಯೆ ಅವರಿಂದ ಹಣ ಪಡೆದುಕೊಂಡು ಮಾಡಿರುತ್ತಾರೆ. ಮೊದಲನೆ ಪ್ರತಿವಾದಿಗೆ ಸಾಕಷ್ಟು ಉತ್ಪನ್ನ ಇರದೆ ಇದ್ದುದ್ದರಿಂದ ಆತನ ತನ್ನ ಮಕ್ಕಳಿಂದ ಹಣ ಪಡೆದುಕೊಂಡು ಮದುವೆ ಮಾಡಿರುತ್ತಾರೆ. ನನ್ನ ಮದುವೆಯ ಕಾಲಕ್ಕೆ ದುಡಿಯುತ್ತಿದ್ದರು. ನನ್ನ ಮದುವೆಯ ಕಾಲಕ್ಕೆ ಮೊದಲನೆ ಪ್ರತಿವಾದಿ ಯಾವುದೇ ಕೆಲಸ ಮಾಡಿಕೊಂಡಿರಲಿಲ್ಲ ಆತ ಪ್ರಶಾಂತ ಲಾಡ್ಜ ನಲ್ಲಿ ಕುಳಿತುಕೊಳ್ಳುತ್ತಿದ್ದ. ಪ್ರಶಾಂತಲಾಡ್ಜನ್ನು ಪ್ರಾರಂಬಿಸಿದಾಗಿನಿಂದ ಅದು ನನ್ನ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲಾತಿ ಇರುತ್ತವೆ ನಾನು ಅವುಗಳನ್ನು ಹಾಜರು ಮಾಡಿರುತ್ತೇನೆ. ಮೃತ ಬಸವರಾಜ ತನ್ನ ಮದುವೆಗಾಗಿ ಮೊದಲನೆ ಪ್ರತಿವಾದಿಗೆ ಹಣ ನೀಡಿದ್ದಾನೋ ಅಥವಾ ಇಲ್ಲ ಎಂಬುದು ನನಗೆ ಗೊತ್ತಿಲ್ಲ.

ಮೃತ ಬಸವರಾಜ ತೀರಿಕೊಂಡಾಗ ಆತನಿಗೆ 35 ವರ್ಷ ವಯಸ್ಸಾಗಿತ್ತು. ಆತನಿಗೆ ಪ್ರತಿವಾದಿ ನಂ.16 ಮತ್ತು 17 ಮಕ್ಕಳು. ಮೃತ ಬಸವರಾಜ ಮೃತ 2 ನೇ ಪ್ರತಿವಾದಿಯ ಕೊಲ್ಡ್ರಿಂಕ್ಸ ಹೌಸನಲ್ಲಿ ಕೆಲಸಕ್ಕೆ ಇದ್ದ. ಆತ ಪಗಾರ ನೀಡುತ್ತಿದ್ದ ಅಥವಾ ಇಲ್ಲ ಎಂಬುದು ನನಗೆ ಗೊತ್ತಿಲ್ಲ. ಮೃತ ಬಸವರಾಜ ಖರ್ಚುಗಳನ್ನು ಮೃತ 2 ಪ್ರತಿವಾದಿ ಮತ್ತು 3 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು. 1995 ರಲ್ಲಿ ನ್ಯೂ ದಿಲ್ಲಿ ಎಂಬ ಅಂಗಡಿಯನ್ನು ಪ್ರಾರಂಬಿಸಲಾಗಿರುತ್ತದೆ. ಅದನ್ನು ಯಾರ ಹೆಸರಿನಲ್ಲಿ ಪ್ರಾರಂಬಿಸಲಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಈಗ ಅದು ಯಾರ ಹೆಸರಿನಲ್ಲಿದೆ ಎಂಬುದು ಸಹ ಗೊತ್ತಿಲ್ಲ. 1997 ರಲ್ಲಿ ದಿಲ್ಲಿ ಸಲೆಕ್ಷನ ಎಂಬ ಹೆಸರಿನ ಅಡಿಯಲ್ಲಿ ರೆಡಿಮೆಡ ಬಟ್ಟೆ ಅಂಗಡಿ ಪ್ರಾರಂಬಿಸಲಾಯಿತು ಎಂದರೆ ಸರಿ. 1998 ರಲ್ಲಿ ದಿಲ್ಲಿ ಟೆಕ್ಸಟೈಲ್ಸ ವ್ಯವಹಾರ ಪ್ರಾರಂಬಿಸಲಾಯಿತು. ದಿಲ್ಲಿ ಸಲೆಕ್ಷನ ಅಂಗಡಿ 19 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಕಮತಗೌಡ ಕಡೆಯಿಂದ ಯಾರು ಆಸ್ತಿ ಖರೀದಿ ಮಾಡಿದ್ದರು ಎಂಬುದು ನನಗೆ ಗೊತ್ತಿಲ್ಲ

ಸದರಿ ಜಾಗೆಯಲ್ಲಿ ದಿಲ್ಲಿ ಕ್ರಿಯೇಷನ್ಸ ರೆಡಿಮೆಡ ಬಟ್ಟೆ ಅಂಗಡಿ ಇದೆ ಎಂದರೆ ಸರಿ. ಸದರಿ ಅಂಗಡಿ 4 ಅಂತಸ್ಥಿನಲ್ಲಿದೆ ಎಂದರೆ ಇರಬಹುದು. ಅದನ್ನು ಪ್ರತಿವಾದಿ ನಂ.7 ನಡೆಸುತ್ತಾರೆ. ಅದರ ಕೆಳಗಡೆ ಜನತಾ ಕೊಲ್ಡ್ರಿಂಕ್ಸ ಹೌಸ ಇದೆ ಎಂದರೆ ಸರಿಯಲ್ಲ. 2014 ರಲ್ಲಿ ದಿಲ್ಲಿ ಪ್ಯಾಶನಾ ಪ್ಲಾಜಾ ಪ್ರಾರಂಬಿಸಲಾಯಿತು ಎಂದರೆ ಹೌದು ಅದನ್ನು 3 ನೇ ಪ್ರತಿವಾದಿ ಪ್ರಾರಂಬಿಸಿದ್ದಾನೆಂದು ನುಡಿದಿರುತ್ತಾರೆ. ನಾವು ಎಲ್ಲ ಅಣ್ಣ ತಮ್ಮಂದಿರು ಬೇರೆ ಬೇರೆ ವ್ಯವಹಾರಗಳನ್ನು ದಿಲ್ಲಿ ರೆಡಿಮೆಡ್ಸ ಆದಾಯದಿಂದ ಪ್ರಾರಂಬಿಸಿದ್ದು ಎಂದರೆ ಸರಿಯಲ್ಲ. ನಮ್ಮ ಅಣ್ಣ ತಮ್ಮಂದಿರಲ್ಲಿ ನನ್ನ ತಂದೆಯ ವ್ಯಾಪಾರದಲ್ಲಿ ಅದರಲ್ಲಿ ಇವತ್ತಿನವರೆಗೂ ವಾಟ್ನಿಯಾಗಿಲ್ಲ ಎಂದರೆ ಸಾಕ್ಷಿ ವಾಟ್ನಿಯಾಗುವಂತಹ ಯಾವುದೇ ಆಸ್ತಿಗಳು ಉಳಿದಿಲ್ಲವೆಂದು ನುಡಿದಿರುತ್ತಾರೆ. ನಮ್ಮ ವ್ಯಾಪಾರದ ದೃಷ್ಟಿಯಿಂದ ಸೇಲ್ ಟ್ಯಾಕ್ಸ ಮತ್ತು ಆದಾಯ ತೆರಿಗೆಯನ್ನು ಬೇರೆ ಬೇರೆಯಾಗಿ ಪಾವತಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ದಿಲ್ಲಿ ರೆಡಿಮೆಡ ಎಂಬ ಹೆಸರಿನಲ್ಲಿ ವ್ಯವಹಾರ ಪ್ರಾರಂಬಿಸಿದ್ದು ಅದರ ಲಾಭದಲ್ಲಿ ನಾವೆಲ್ಲರೂ ದಿಲ್ಲಿ ಎಂಬ ಸಮೂಹ ಸಂಸ್ಥೆಗಳ ಅಡಿಯಲ್ಲಿ ಬೇರೆ ಬೇರೆ ವ್ಯವಹಾರ ಪ್ರಾರಂಬಿಸಿದ್ದೇವೆ ಎಂದರೆ ಸಾಕ್ಷಿ ಸದರಿ ದಿಲ್ಲಿ ರೆಡಿಮೆಡ ವ್ಯಾಪಾರಗಳನ್ನು 3 ನೇ ಪ್ರತಿವಾದಿ ಪ್ರಾರಂಬಿಸಿದ್ದ ಎಂದು ನುಡಿದಿರುತ್ತಾರೆ.

ದಾವಾ ಆಸ್ತಿಗಳಲ್ಲಿ ಪ್ರತಿವಾದಿ ನಂ.15 ರಿಂದ 17 ಇವರಿಗೆ ಪಾಲನ್ನು ತಪ್ಪಿಸುವ ಉದ್ದೇಶದಿಂದ ನಾನು ಪಾಲು ಆಗುವ ಯಾವುದೇ ಆಸ್ತಿಗಳು ಉಳಿದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಬಸವರಾಜ ತಾನು ಸಾಯುವ ವರೆಗೂ ನಮ್ಮ ಕುಟುಂಬದ ಎಲ್ಲಾ ವ್ಯಾಪಾರದ ವ್ಯವಾಹರಗಳನ್ನು ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ಆತ ಈಗ ತೀರಿಕೊಂಡಿದ್ದು ಅದರ ದುರುಪಯೋಗ ಪಡೆದುಕೊಂಡು ಮತ್ತು 15 ರಿಂದ 17 ನೇ ಪ್ರತಿವಾದಿಗಳಿಗೆ ಆಸ್ತಿಗಳಲ್ಲಿ ಪಾಲನ್ನು ತಪ್ಪಿಸಲು ನಾವು ಸ್ವಂತವಾಗಿ ವ್ಯಾಪಾರ ಪ್ರಾರಂಬಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಎಲ್ಲಾ ಅಣ್ಣ ತಮ್ಮಂದಿರು ಪ್ರತಿವಾದಿ ನಂ.15 ರಿಂದ 17 ಇವರನ್ನು ಮನೆಯಿಂದ ಹೊರ ಹಾಕಿದ್ದು ಅವರಿಗೆ ಹೊಟ್ಟೆಗೆ ಬಟ್ಟೆಗೆ ನೀಡದೆ ಇದ್ದಾಗ ಅವರು ನ್ಯಾಯಾಲಯಕ್ಕೆ ಜೀವನಾಂಶ ನೀಡುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ಅವರನ್ನು ಮೃತ 2 ನೇ ಪ್ರತಿವಾದಿ ನೋಡಿಕೊಳ್ಳುತಿದ್ದರು ಎಂದು ನುಡಿದಿರುತ್ತಾರೆ. ಮೃತ ಬಸವರಾಜ ತಾನು ಸಾಯುವವರೆಗೂ ಎಲ್ಲಾ ವ್ಯವಾಹರಗಳನ್ನು ಮಾಡುತ್ತಿದ್ದ ಪ್ರತಿವಾದಿ ನಂ.17 ಸ್ವಲ್ಪ ಮಾನಸಿಕ ಇದ್ದುದ್ದರಿಂದ ದುರುಪಯೋಗ ಪಡೆದುಕೊಂಡು ನಾವು ಆತನ ಹೆಸರಿನಲ್ಲಿ ಯಾವುದೇ ವ್ಯವಹಾರ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

17 ನೇ ಪ್ರತಿವಾದಿ ಎಸ್ ಎಸ್ ಎಲ್ ಸಿ ವರೆಗೆ ಕಲ್ಲಿತಿದ್ದು ಈಗ ವಾದಿಯ ಬಟ್ಟೆ ಅಂಗಡಿಯಲ್ಲಿ ಇರುತ್ತಾರೆ. ಆತನಿಗೆ ವಾದಿ ಸಂಬಳ ನೀಡುತ್ತಾನೋ ಅಥವಾ ಇಲ್ಲ ಎಂಬುದು ನನಗೆ ಗೊತ್ತಿಲ್ಲ. 17 ನೇ ಪ್ರತಿವಾದಿ ವಾದಿಯ ಜೊತೆ ಓಡಾಡುವುದನ್ನು ಮತ್ತು ಆತನ ಅಂಗಡಿಯಲ್ಲಿ ಇರುವುದನ್ನು ನಾನು ನೋಡಿದ್ದರಿಂದ ಆತ ವಾದಿಯ ಅಂಗಡಿಯಲ್ಲಿ ಇರುತ್ತಾನೆಂದು ಹೇಳುತ್ತಿದ್ದೇನೆ. ಎಲ್ಲಾ ದಾವಾ ಆಸ್ತಿಗಳಲ್ಲಿ ಪ್ರತಿವಾದಿ ನಂ.15 ರಿಂದ 17 ಇವರಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ಈಗ ನಾವು ವ್ಯಾಪಾರ ದೃಷ್ಟಿಯಿಂದ ಬೇರೆ ಬೇರೆ ಉದ್ಯೋಗ ಮಾಡುತ್ತಿದ್ದುದ್ದರಿಂದ ದುರುಪಯೋಗ ಪಡೆದುಕೊಂಡು ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲನೆ ಪ್ರತಿವಾದಿ ಸಾಕ್ಷ್ಯ ನುಡಿಯುವ ಸಮರ್ಥನಿದ್ದು ಆತ ಸಾಕ್ಷಿ ನುಡಿದರೆ ನನಗೆ ಅನಾನುಕೂಲವಾಗುತ್ತದೆ ಎಂದು ಹೇಳಿ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲನೆ ಪ್ರತಿವಾದಿಯೇ ಮನೆಯ ವ್ಯವಹಾರ ಮತ್ತು ಇನ್ನುಳಿದ ವ್ಯಾಪಾರ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಆತನ ದುಡಿಮೆಯಿಂದ ಬಂದ ಉತ್ಪನ್ನದಿಂದ ನಾವು ಎಲ್ಲಾ ಅಣ್ಣ ತಮ್ಮಂದಿರು ಬೇರೆ ಬೇರೆ ವ್ಯವಹಾರ ಪ್ರಾರಂಬಿಸಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಹಾಜರು ಮಾಡಿದ ದಾಖಲಾತಿಗಳು ನಾನೇ ಸೃಷ್ಟಿಸಿದ್ದವು ಎಂದರೆ ಸರಿಯಲ್ಲ.

ಪ್ರತಿವಾದಿ ನಂ.2 ರಿಂದ 5, 7 ರಿಂದ 9 ಮತ್ತು 10 ರವರ ಪರ ವಕೀಲರ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ. ಆದರೆ ಪ್ರತಿವಾದಿ ನಂ.15 ರಿಂದ 17 ರರ ಪರ ವಕೀಲರಎ ಪಾಟೀ ಸವಾಲು ಪ್ರಾರಂಬಿಸುವ ಮೊದಲು ಯಾವುದೇ ಕಾಲಾವಕಾಶ ಕೋರಿರುವುದಿಲ್ಲ ಮತ್ತು ಪ್ರತಿವಾದ ಪತ್ರ ಪರೀಶಿಲಿಸಲಾಗಿ ಈ ಹಂತದಲ್ಲಿ ಅವರ ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣಗಳು ಕಂಡು ಬರುವುದಿಲ್ಲ. ಕಾರಣ ಪ್ರತಿವಾದಿ ನಂ.2 ರಿಂದ 5, 7 ರಿಂದ 9 ಮತ್ತು 10 ರವರ ಪರ ವಕೀಲರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

19 ನೇ ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ